# ಸಲ್ಲದೋ ಕೃಷ್ಣ ಸಲ್ಲದೋ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru, page No. 107.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 551.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 418.
4. **Note:** Lyrics given here are as per Ref. 1. The wordings in Ref. 2 & 3 are similar to Ref. 1 with few variations which are not considered here.
5. **Note:** Ankita is different in both these books. We have considered Ref.1 as standard and taken that Ankita for listing.
6. **Note:** Singer has followed these lyrics.

ರಾಗ: ಕಲ್ಯಾಣಿ ತಾಳ: ಅಟ

ಸಲ್ಲದೋ ಕೃಷ್ಣ ಸಲ್ಲದೋ ಸಿರಿ
ವಲ್ಲಭ ಇದ ನೋಡು ಪಾಲಿಸಬೇಕೋ ॥ ಪ ॥

ಬಿತ್ತಿ ಬೆಳೆಸಿ ತಲೆಯೆತ್ತಿದ ಪೈರನು
ಮತ್ತೆ ತುರುವಿಂಡನು ಬಿಟ್ಟು ಮೆಲ್ಲಿಸುವುದು ॥ 1 ॥

ಸಾವಿರ ಹೊನ್ನಿಕ್ಕಿ ಸದನವ ಸಾಧಿಸಿ
ಪಾವಕನುರಿಗೆ ನೀನೊಪ್ಪಿಸಿ ಕೊಡುವುದು ॥ 2 ॥

ಕುಶಲದಿ ಬಣ್ಣಿಸಿ ಬರೆದು ಚಿತ್ತಾರವ
ಮಸಿ ಮಣ್ಣ ಮಾಡಿ ನೀ ಕೆಡಿಸುವುದು ॥ 3 ॥

ಬಲುಕಾಲ ಮುದ್ದಿಸಿ ಕಲಿಸಿ ಮಾತುಗಳನು
ಗಿಳಿಯ ಸಾಕಿ ಬಾವುಗಗೆ ಒಪ್ಪಿಸುವುದು ॥ 4 ॥

ಕರುಣಿಸು ಸಿರಿ ಪುರಂದರ ವಿಠಲ ನಮ್ಮ
ಹಿರಿದು ಮಾಡಿ ಮತ್ತೆ ಕಿರಿದು ಮಾಡುವುದು     || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಮನುಷ್ಯ ಜನ್ಮ ಬಂದಿರುವುದೇ ಹೆಗ್ಗಳಿಕೆ; ಅನೇಕ ಜನ್ಮಗಳ ಪುಣ್ಯ ಫಲ. ಹೀಗಿರುವಾಗ ಈ ಜನ್ಮದಲ್ಲಿ ಸಾಧನೆಗೆ ಅವಕಾಶ ಮಾಡಿಕೊಡದೆ ಅದನ್ನು ವ್ಯರ್ಥವಾಗಿ ನೀಗಿಸುವುದು ಅಥವಾ ಪಾಪಗಳನ್ನು ಮಾಡಿಸಿ ದುರ್ಗತಿಗೆ ಎಳೆಯುವುದು ಸಲ್ಲದು. ಮನುಷ್ಯ ಜನ್ಮವನ್ನು ಒದಗಿಸಿದ ಪರಮಾತ್ಮನೇ ಸದ್ಗತಿಗೂ ಅವಕಾಶ ಮಾಡಿಕೊಡಬೇಕು ಎಂದು ಅವನಲ್ಲಿ ಆಗ್ರಹಮಾಡಿ ಬೇಡಿಕೊಂಡಿದ್ದಾರೆ.

**ತುರುವಿಂಡು** – ಹಸುಗಳ ಗುಂಪನ್ನು.

**ಸಾಧಿಸಿ** – ಕಟ್ಟಿಸಿ.

**ಪಾವಕನುರಿಗೆ** – ಬೆಂಕಿಗೆ.

**ಚಿತ್ತಾರ** – ಚಿತ್ರ.

**ಸದನ** = ಮನೆ

**ಪಾವಕ** = ಅಗ್ನಿ

**ಮಸಿ ಮಣ್ಣು ಮಾಡು** = ಹೊಲಸು ಮಾಡು, ಕೆಡಿಸು

**ಬಾವುಗ** – ಗಂಡು ಬೆಕ್ಕು (ಬೋಕಾ).

**ಹಿರಿದು ಮಾಡಿ ಮತ್ತೆ ಕಿರಿದು ಮಾಡುವುದು** = ಉದ್ಧಾರ ಮಾಡಿ ಮರಳಿ ದೀನನನ್ನು ಮಾಡುವುದು.

**ವಿ.ಸೂ. : -** ಮೊದಲಿನ ನಾಲ್ಕು ನುಡಿಗಳಲ್ಲಿ ದೃಷ್ಟಾಂತಾಲಂಕಾರವಿದೆ.

**Classification:** Keerthane
**Ankita:** siri purandara vittala
**Location:** NA
**Category:** Krishna Stuti, pooja tatva
**Sub-Category:** Krishna, govu, bangara, mannu, gili, bekku, karuna,

**Pravachana:** NA

**Explanation:** Dr. Vijayendra Desai